

# ಮನುರಂಜನ್ ಕಮ್‌ಬ್ಯಾಕ್

ಕೆಲವು ದಿನಗಳ ಬ್ರೇಕ್ ನಂತರ ಮತ್ತೆ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ ರವಿಚಂದ್ರನ್ ಪುತ್ರ ಮನುರಂಜನ್. 'ಈ ಬಾರಿ ಸುಮ್ಮನೆ ಕಮ್‌ಬ್ಯಾಕ್ ಆಗುವುದಿಲ್ಲ, ದೊಡ್ಡ ಡಿಕ್ಲರೇಷನ್ ಆಗಿರುತ್ತದೆ' ಎಂದು ಘೋಷಿಸಿಕೊಂಡು ಬರುತ್ತಿದ್ದಾರೆ.

'ಸಾಹೇಬ' ಹಾಗೂ 'ಮುಗಿಲ್‌ಪೇಟೆ' ಸಿನಿಮಾಗಳಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷೆಗೆ ಒಡ್ಡಿದ್ದರು ಮನುರಂಜನ್. ಆದರೆ ಆ ಸಿನಿಮಾಗಳು ನಿರೀಕ್ಷಿತ ಫಲ ನೀಡಿರಲಿಲ್ಲ. ಇದು ತಮ್ಮನ್ನು ತಾವು ಪುನರ್‌ಪರಿಶೀಲಿಸಿಕೊಳ್ಳಲು ಕಾರಣವಾಯಿತು ಎಂದೂ ಹೇಳಿಕೊಂಡಿದ್ದರು.

''ಸಾಹೇಬ' ಕೆಟ್ಟ ಸಿನಿಮಾ ಆಗಿರಲಿಲ್ಲ. 'ಮುಗಿಲ್‌ಪೇಟೆ' ಸಿನಿಮಾ ಕೂಡ ಕಂಟೆಂಟ್ ವಿಷಯದಲ್ಲಿ ಚೆನ್ನಾಗಿಯೇ ಇತ್ತು. ಆದರೆ ಪ್ರೇಕ್ಷಕರೊಂದಿಗೆ ಇವು ಕನೆಕ್ಟ್ ಆಗಲಿಲ್ಲ. ಹೀಗಾಗಿ ಮತ್ತೆ ನನ್ನನ್ನು ನಾನು ವಿಶ್ಲೇಷಿಸಿಕೊಳ್ಳಬೇಕಿತ್ತು. ನನ್ನ ಕರಿಯರ್, ನನ್ನ ಪರ್ಫಾರ್ಮೆನ್ಸ್ ಹಾಗೂ ನನ್ನ ಜೀವನವನ್ನೂ ವಿಶ್ಲೇಷಣೆ ಮಾಡಿಕೊಂಡಿದ್ದೇನೆ. ಇದೀಗ ಮತ್ತೆ ಸಿನಿಮಾಗಳತ್ತ ಬರುತ್ತಿರುವುದು ಹೊಸ ಆರಂಭ'' ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ.

'ಹೊಸಬನಾಗಿ ನನ್ನ ಕೆಲಸ ಆರಂಭಿಸುತ್ತಿದ್ದೇನೆ. ನನ್ನ ಲುಕ್, ಬಾಡಿ ಲಾಂಗ್ವೇಜ್ ಬದಲಿಸಿಕೊಂಡಿದ್ದೇನೆ. ಪರ್ಫಾರ್ಮೆನ್ಸ್ ಸ್ಟೈಲ್ ಅನ್ನೂ ಬದಲಿಸಿಕೊಳ್ಳುತ್ತಿದ್ದೇನೆ. ಈ ಕಮ್‌ಬ್ಯಾಕ್ ಚೆನ್ನಾಗಿರಬೇಕು ಎಂದು ಎಲ್ಲ ತಯಾರಿ ಮಾಡಿಕೊಂಡಿದ್ದೇನೆ' ಎಂದಿದ್ದಾರೆ.

ಇದೀಗ ಎರಡು ಸಿನಿಮಾಗಳಿಗೆ ಸಹಿ ಹಾಕಿದ್ದಾರೆ. ಇದೇ ಸೆಪ್ಟೆಂಬರ್‌ನಲ್ಲಿ ಚಿತ್ರೀಕರಣ ಆರಂಭಗೊಳ್ಳಲಿದೆ. ಸದ್ಯಕ್ಕೆ ರವಿಚಂದ್ರನ್ ಅವರ ಜೊತೆ ಮತ್ತೊಂದು ಸಿನಿಮಾವೊಂದರ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದು, 25 ದಿನಗಳ ಶೂಟಿಂಗ್ ಬಾಕಿ ಇದೆ.



# ಸಿರಿ ಪಾತ್ರ ವೈಖರಿ

'ಕಲಾವಿದರು ಯಾವುದೇ ಪಾತ್ರವನ್ನು ಪೂರ್ಣವಾಗಿ ಆವರಿಸಿಕೊಂಡು ತಮ್ಮ ತನವನ್ನು ಸಂಪೂರ್ಣ ಮರೆಮಾಚುವುದೇ ನಟನೆ' ಎಂದಿದ್ದಾರೆ ನಟಿ ಸಿರಿ ರವಿಕುಮಾರ್.

'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾಗಾಗಿ ಕಳೆದ ವರ್ಷ ಉತ್ತಮ ನಟಿ ಪ್ರಶಸ್ತಿ ಲಭಿಸಿದ ಬೆನ್ನಲ್ಲೇ ಕೆಲವು ಅವಕಾಶಗಳು ಅರಸಿ ಬಂದಿದ್ದು, ಎರಡು ಮೂರು ಪ್ರಾಜೆಕ್ಟ್‌ಗಳಲ್ಲಿ ತೊಡಗಿಕೊಂಡಿದ್ದಾರೆ ಸಿರಿ. ಈ ನಡುವೆ ಈಚೆಗೆ ನಾಟಕವೊಂದಕ್ಕೂ ಬಣ್ಣ ಹಚ್ಚಿದ್ದು, ನಟ ಕಿಶೋರ್ ಕುಮಾರ್ ಅವರೊಂದಿಗೆ ಅಭಿನಯಿಸಿ ಮೆಚ್ಚುಗೆ ಪಡೆದುಕೊಂಡಿದ್ದಾರೆ.

ವೇದಿಕೆ ಯಾವುದಾದರೂ ಪಾತ್ರವನ್ನು ನಿರ್ವಹಿಸುವ ರೀತಿಯೇ ಮುಖ್ಯ ಎನ್ನುವುದು ಸಿರಿ ಅವರ ಮಾತು. 'ನಾಟಕದ ವೇದಿಕೆ ಮೇಲಿರಲಿ, ಸ್ಕ್ರೀನ್ ಮೇಲಾಗಲಿ, ನಾನು ಸಿರಿ ಆಗಿರುವುದಿಲ್ಲ. ಅಲ್ಲಿನ ಪಾತ್ರ ನಾನಾಗಿರುತ್ತೇನೆ. ನನ್ನ ಗಮನವೇನಿದ್ದರೂ ಪಾತ್ರದ ಮೇಲಷ್ಟೆ. ಯಾವುದೇ ಪಾತ್ರದಲ್ಲಿಯೂ ನಾನು ಸಿರಿಯನ್ನು ತರುವುದಿಲ್ಲ. ಆ ಪಾತ್ರವೇ ನಾನಾಗಲು ಪ್ರಯತ್ನಿಸುತ್ತೇನೆ' ಎಂದು ವ್ಯಾಖ್ಯಾನಿಸಿದ್ದಾರೆ.

ಕನ್ನಡ ಸಿನಿಮಾರಂಗದಲ್ಲಿ ಮಹಿಳಾಪ್ರಧಾನ ಕಥೆಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, 'ಕನ್ನಡದಲ್ಲಿ ಮಹಿಳೆಯ ದೃಷ್ಟಿಕೋನದಲ್ಲಿ ಹೇಳಬಹುದಾದ ಹಲವು ಆಸಕ್ತಿಕರ ಕಥೆಗಳಿವೆ. ಮಹಿಳಾಪ್ರಧಾನ ಎಂದಮಾತ್ರಕ್ಕೆ ಆಕೆಯ ಸಾಹಸದ ಕಥೆಯೇ ಆಗಿರಬೇಕು ಎಂದೇನೂ ಇಲ್ಲ. ಆಕೆಯ ಕಥೆಯನ್ನು ಹೇಳಿದರೆ ಸಾಕು. ಗ್ಲೋರಿಫೈ ಮಾಡುವ ಅವಶ್ಯಕತೆ ಇರುವುದಿಲ್ಲ' ಎಂದಿದ್ದಾರೆ. ಇದೇ ಜುಲೈ ಅಥವಾ ಆಗಸ್ಟ್‌ನಲ್ಲಿ ಸಿನಿಮಾ ಕೆಲಸಗಳು ಆರಂಭವಾಗಲಿವೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.